SERVICE ABOVE SELF

2025-26
Rotary
विश्वमित्रः
ವಿಶ್ವಮಿತ್ರ
VISHWAMITHRA
Weekly House Bulletin of Rotary Club Shimoga, R.I. Dist. 3182
UNITE FOR GOOD
Rotary
Rtn. Francesco Arezzo
RI President 2025-26

Rtn. K. Palaksha, District Governor 2025-26
Rtn. Anand R., President, Mob: 99800 93066
Rtn. Vishwas Y., Secretary, Mob : 99800 63180
Rtn. M. Madhavachar, Bulletin Editor, Mob: 98862 73495

We meet every Wednesday at 6.45p.m. at Rotary Youth Centre, Sowlanga Road, L.B.S.Nagar, Shivamogga- 577 204

ಸಂಪುಟ – 68 | ಸಂಚಿಕೆ –13 | ದಿನಾಂಕ : 01–10–2025

## ದಿನಾಂಕ: 01.10.2025ರ ವಾರದ ಸಭೆ

**ದಿನಾಂಕ: 01.10.2025 ರ ಬುಧವಾರದಂದು ಈ ಸಾಲಿನ ಹದಿಮೂರನೇ ವಾರದ ಸಭೆ. ಇದು ಕ್ಲಬ್ ಅಫೇರ್ಸ್ ಸಭೆಯಾಗಿದ್ದು, ಕ್ಲಬ್‌ನ ಆಗು ಹೋಗುಗಳ ಬಗ್ಗೆ ಚರ್ಚೆ, ಮುಂದಿನ ಯೋಜನೆಗಳ ಬಗ್ಗೆ ಮತ್ತು ಈವರೆಗಿನ ಲೆಕ್ಕಪತ್ರಗಳ ಬಗ್ಗೆ ಚರ್ಚಿಸಲಾಯಿತು. ಅಧ್ಯಕ್ಷರಾದ ರೊ.ಆರ್.ಆನಂದ್ ಮತ್ತು ಕಾರ್ಯದರ್ಶಿ ರೊ.ವಿಶ್ವಾಸ್ ಎಲಬುರ್ಗಿಯವರು ವೇದಿಕೆಯಲ್ಲಿದ್ದು ಕಲಾಪವನ್ನು ನಡೆಸಿಕೊಟ್ಟರು. ಸಾರ್ಜೆಂಟ್ ರೊ.ಎಸ್. ಮಂಜುನಾಥರವರು ಅಧ್ಯಕ್ಷರಿಗೆ ರೋಟರಿಯ ಕಾಲರ್ ತೊಡಿಸುವುದರ ಮೂಲಕ ಸಭೆಗೆ ಚಾಲನೆ ಒದಗಿಸಿದರು.**




ಆರಂಭಕ್ಕೆ ಪಿಹೆಚ್‌ಎಫ್ ಜಿ. ಸತ್ಯನಾರಾಯಣರವರಿಂದ "ಜಗದೋದ್ಧಾರಿಣಿ ಮಾತಾದುರ್ಗಾ" ಹಾಡಿನ ಮೂಲಕ ಪ್ರಾರ್ಥನೆಯಾಯಿತು. ಕಾರ್ಯದರ್ಶಿ ರೊ.ವಿಶ್ವಾಸ್ ಎಲಬುರ್ಗಿಯವರು ಸರ್ವರನ್ನು ಸ್ವಾಗತಿಸಿದರು ಮತ್ತು ಪ್ರಕಟಣೆ ನೀಡಿದರು.

ಇದೇ ಸಂದರ್ಭದಲ್ಲಿ ಖಜಾಂಚಿಯವರ ಪರವಾಗಿ ಅಧ್ಯಕ್ಷರಾದ ರೊ.ಆರ್.ಆನಂದರವರು ಈವರೆಗೂ ಆಗಿರುವ ಜಮಾ–ಖರ್ಚಿನ ವಿವರಗಳುಳ್ಳ ಪಟ್ಟಿಯನ್ನು ಆಗಮಿಸಿದ್ದ ಸರ್ವರಿಗೂ ಚರ್ಚೆಗಾಗಿ ವಿತರಿಸಿದರು.

- ರೊ. ವೀರಣ್ಣ ಎ. ಹುಗ್ಗಿಯವರು, ರೊ. ವೈ.ವಿ.ವೆಂಕಟರಮಣ ಜೋಯ್ಸ್‌ರವರು ಲೆಕ್ಕಪತ್ರದ ಮೇಲೆ ಪ್ರಶ್ನೆಗಳನ್ನು ಕೇಳಿದರು. ಅಲ್ಲದೇ ಈವರೆವಿಗೆ ಎಷ್ಟು ಸದಸ್ಯರ ಸದಸ್ಯತ್ವ ಶುಲ್ಕ ಸಂಗ್ರಹವಾಗಿದೆ ಎಂಬ ಪ್ರಶ್ನೆಗೆ, ಅಧ್ಯಕ್ಷರು, ಈವರೆವಿಗೆ 96 ಜನರ ಸದಸ್ಯತ್ವ ಶುಲ್ಕ ಸಂಗ್ರಹವಾಗಿದೆ ಎಂದು ತಿಳಿಸಿದರು. ರೊ. ವಿಜಯ ಕುಮಾರ್‌ರವರು ಮಾತನಾಡಿ, ಸದಸ್ಯತ್ವ ಶುಲ್ಕ ನೀಡುವುದರ ಬಗ್ಗೆ ವಿಶ್ವಮಿತ್ರದಲ್ಲಿ ಪ್ರಕಟಿಸಬೇಕಾಗಿ ಕೋರಿದರು.
- ರೋಟರಿ ಸೆಂಟಿನರಿ ಫೌಂಡೇಷನ್‌ನ ವೆಚ್ಚದ ಬಗ್ಗೆ ಮಾಜಿ ಸಹಾಯಕ ಗವರ್ನರ್ ಹಾಗೂ ರೋಟರಿ ಸೆಂಟಿನರಿ ಫೌಂಡೇಷನ್ ಚೇರ್‌ಮನ್ ರೊ. ಎನ್.ಎಸ್. ಶ್ರೀಧರ್‌ರವರು ಮಾತನಾಡಿ, ಹಣದ ಕೊರತೆ ಇರುವುದರ ಬಗ್ಗೆ ಸದಸ್ಯರಿಗೆ ವಿವರಿಸಿದರು.
- ರೊ. ದೀಪಕ್ ಕೋರಿಯವರು ಅಧ್ಯಕ್ಷರೊಂದಿಗೆ ಮಾತನಾಡುತ್ತಾ, ಕೆಲವೊಂದು ವೆಚ್ಚಗಳು ಮೈಮೇಲೆ ಬರುತ್ತವೆ ಎಂದು ತಿಳಿಸಿದ್ದೀರಿ. ಅದೇನು ಎಂದು ಕೇಳಿದರು. ಅದಕ್ಕುತ್ತರಿಸಿದ ಅಧ್ಯಕ್ಷರಾದ ರೊ. ಆರ್. ಆನಂದರವರು, ಪ್ರತಿಯೊಂದು ವಿವರಗಳನ್ನು ತಿಳಿಸಿದರು. ಸೆಂಟಿನರಿ ಕಟ್ಟಡದ ಸುತ್ತಮುತ್ತಲಿನ ಶುಚಿತ್ವದ ಬಗ್ಗೆ ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, ಸುಮಾರು 70,00,000/–ರೂಗಳ ಈ ಕಟ್ಟಡವನ್ನು ನಿರ್ಮಿಸಿದ್ದೇವೆ. ಅದು ನಮ್ಮ ಸಭೆಗಳಿಗೆ ಮಾತ್ರವೇ ಬಳಕೆಯಾಗುತ್ತಿದೆ. ಇಡೀ ಕಟ್ಟಡವನ್ನು ನಿರ್ವಹಣೆ ಮಾಡಲು







### ಈ ವಾರದ ಸಭೆ

**ದಿನಾಂಕ: 08–10–2025, ಬುಧವಾರ** **ಸಂಜೆ 6:45**

**ಮುಖ್ಯ ಅತಿಥಿ:**

**ಶ್ರೀ ನೃಪತುಂಗ**

**ಸಾರ್ವಜನಿಕ ಸಂಪರ್ಕ ಅಧಿಕಾರಿ, ರಾಷ್ಟ್ರೀಯ ಶಿಕ್ಷಣ ಸಮಿತಿ**

**ವಿಷಯ:**

**ಸಾಹಿತ್ಯ ಮತ್ತು ವೈಚಾರಿಕ ಪ್ರಜ್ಞೆ**

**ದಯಮಾಡಿ ರೋಟರಿ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ.**

**ಸ್ಥಳ: ರೋಟರಿ ಯುವ ಕೇಂದ್ರ,** ಸವಳಂಗ ರಸ್ತೆ, ಶಿವಮೊಗ್ಗ







ಬೇರೆಯ ಆದಾಯದ ಮೂಲಗಳಿಲ್ಲದಿರುವುದರಿಂದ ಇದರ ನಿರ್ವಹಣೆ ಪೂರ್ಣ ಪ್ರಮಾಣದಲ್ಲಿ ನಮ್ಮ ಕ್ಲಬ್‌ನಿಂದ ಸಾಧ್ಯವಾಗುತ್ತಿಲ್ಲ ಎಂದರು.

- ಖರ್ಚುಗಳು ಹೇಗೆ ಬರುತ್ತವೆ. ಇದರಿಂದ ಹಣಕಾಸಿನ ಕೊರತೆ ಹೇಗೆ ಉಂಟಾಗುತ್ತದೆ ಎಂಬುದನ್ನು ಸಂಪೂರ್ಣವಾಗಿ ಅಧ್ಯಕ್ಷರು ವಿವರ ನೀಡಿದರು. ಅದಲ್ಲದೇ ಕಲ್ಚರಲ್ ಮೀಟ್ ಮತ್ತು ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳ ರಿವೀವ್ ಸಭೆಗೂ ಕೂಡ ಕ್ಲಬ್‌ನಿಂದ ಹಣ ನೀಡಬೇಕಾಗುತ್ತದೆ. ಹೀಗೆ ಕೆಲವು ಅನಿರೀಕ್ಷಿತ ಖರ್ಚುಗಳು ಮೈಮೇಲೆ ಬರುತ್ತವೆ ಎಂದರು.
- ರೊ.ಎನ್.ಜಿ. ಶಶಿಧರ್‌ರವರು ರೋಟರಿ ಜಿಮ್ ಬಗ್ಗೆ ವಿವರ ಕೇಳಿದರು. ಜಿಮ್ ನಡೆಸುತ್ತಿರುವ ಶ್ರೀ ರಾಘವೇಂದ್ರರವರು ಈಗ ಹಾಲಿ ತಿಂಗಳಿಗೆ ರೂ 10,000/– ನೀಡುತ್ತಿದ್ದಾರೆ. ಅದನ್ನು ಅವರಿಗೆ ಹೊರಗುತ್ತಿಗೆ ನೀಡಲಾಗಿದೆ. ಮಾಜಿ ಅಧ್ಯಕ್ಷರಾದ ರೊ.ವೀರಣ್ಣ ಹುಗ್ಗಿಯವರು ಮಾತನಾಡಿ ಜಿಮ್ ಬಗ್ಗೆ ಹೇಗೆ ನಿಚ್ಚಳವಾಗಿ ಕಾರ್ಯಪ್ರವೃತ್ತರಾಗಬೇಕೆಂದು ಸಲಹೆ ನೀಡಿದರು. ಆ ಬಗ್ಗೆ ರೊ. ಎನ್.ಎಸ್. ಶ್ರೀಧರ್‌ರವರು ಮಾತನಾಡಿ ಸಮಜಾಯಿಷಿ ನೀಡಿದರು.
- ರೊ.ಎಸ್. ಮಂಜುನಾಥರವರು ಮಾತನಾಡಿ, ತಿಂಗಳಿಗೊಮ್ಮೆ ನಾವೇ ರೊಟೇರಿಯನ್ನರೆಲ್ಲಾ ಸೇರಿ ಸಭಾಂಗಣದ ಸುತ್ತಮುತ್ತ ಸ್ವಚ್ಚತಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬಹುದು ಇದು ಕೇವಲ 1 ಗಂಟೆ ಕೆಲಸವಾಗುತ್ತದೆ ಎಂದರು. ಈ ಬಗ್ಗೆ, ಮಾಜಿ ಕಾರ್ಯದರ್ಶಿ ರೊ.ವೈ.ವಿ.ವೆಂಕಟರಮಣ ಜೋಯ್ಸ್, ಮಾಜಿ ಅಧ್ಯಕ್ಷರಾದ ರೊ.ಹೆಚ್.ಎಸ್. ಮೋಹನ್, ಮಾಜಿ ಅಧ್ಯಕ್ಷರಾದ ರೊ. ಡಿ.ಎಲ್. ಮಂಜುನಾಥರವರು ಕೆಲವೊಂದು ಅಂಶಗಳನ್ನು ಮಾತನಾಡಿ ಸಲಹೆ ನೀಡಿದರು.
- ಅಧ್ಯಕ್ಷರಾದ ರೊ. ಆರ್. ಆನಂದರವರು ತಮ್ಮ ಮುಂದಿನ ಹಲವಾರು ಯೋಜನೆಗಳ ಬಗ್ಗೆ ಈ ಕೆಳಕಂಡಂತೆ ವಿವರಿಸಿದರು.
  - ಉನ್ನತಿ ಬಿಲ್ಡಿಂಗ್ ಇಂಡಿಯಾ ಮೂವ್‌ಮೆಂಟ್–ಎನ್.ಜಿ.ಓ ಮೂಲಕ ಕೆಲವು ಸೋಶಿಯಲ್ ಅವೇರ್‌ನೆಸ್ ಕಾರ್ಯಕ್ರಮ ಹಮ್ಮಿಕೊಳ್ಳುತ್ತಿದ್ದೇವೆ. ಶಿವಮೊಗ್ಗೆಯಲ್ಲಿರುವ ಸುಮಾರು 5 ರಿಂದ 6 ಶಾಲೆಗಳನ್ನು ಆಯ್ಕೆ ಮಾಡಿಕೊಂಡು ಅಲ್ಲಿನ ಮಕ್ಕಳಲ್ಲಿರುವ ನ್ಯೂನತೆಗಳನ್ನು ಸ್ಕ್ರೀನ್ ಮಾಡಿಕಂಡು ಹಿಡಿದು ಅದರ ಪರಿಹಾರಕ್ಕೆ ಶ್ರಮಿಸುವ ಕಾರ್ಯಯೋಜನೆ ಇದಾಗಿದೆ. ಇದಕ್ಕೆ ಪದವಿ ಮತ್ತು ಉನ್ನತ ಪದವಿ ಪಡೆದವರಿಗೆ ತರಬೇತಿ ನೀಡಿ ಶಾಲೆಗೆ ಕಳುಹಿಸಿಕೊಡಲಾಗುವುದು.
  - ಕಲ್ಚರಲ್ ಮೀಟ್–ಇದನ್ನು ದಿನಾಂಕ: 26.10.2025 ರಂದು ನಮ್ಮ ಕ್ಲಬ್‌ನ ಮುಂದಾಳತ್ವದಲ್ಲಿ ಏರ್ಪಡಿಸಲಾಗುವುದು. ಇನ್ನೂ ಸ್ಥಳ ನಿಗದಿಯಾಗಿರುವುದಿಲ್ಲ. ಆ ಬಗ್ಗೆ ಮುಂದೆ ತಿಳಿಸಲಾಗುವುದು. ನಮ್ಮ ಕ್ಲಬ್‌ನಿಂದ ಪ್ರತಿಭಾನ್ವಿತ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಲು ಕೋರಿದರು. ಈ ಬಗ್ಗೆ ರೊ. ವನಿತಾ ಸಂದೀಪ್‌ನವರು ಈ ಕಾರ್ಯವನ್ನು ನಡೆಸಿಕೊಡಲು ಒಪ್ಪಿದ್ದು, ಆ ಬಗ್ಗೆ ರೊ. ವೀರಣ್ಣ ಎ. ಹುಗ್ಗಿಯವರು, ರೊ.ವೈ.ವಿ.ವೆಂಕಟರಮಣ ಜೋಯ್ಸ್‌ರವರು ಲೀಡ್ ತೆಗೆದುಕೊಂಡಿದ್ದಾರೆ.
  - ನಮ್ಮ ಕ್ಲಬ್ ಮತ್ತು ಇನ್ನರ್‌ವ್ಹೀಲ್ ಕ್ಲಬ್‌ನಿಂದ ಡಿಸೀಸ್ ಪ್ರಿವೆನ್ಶನ್, ಥೈರಾಯ್ಡ್, ಸ್ತನ ಕ್ಯಾನ್ಸರ್ ಜಾಗೃತಿ ಮತ್ತು ಮಾರ್ಗದರ್ಶನ ಶಿಬಿರವನ್ನು ಆಯೋಜಿಸುವ ಬಗ್ಗೆಯು ತಿಳಿಸಿದರು. ಇದಕ್ಕೆ ಮ್ಯಾಕ್ಸ್ ಆಸ್ಪತ್ರೆ ಮತ್ತು ಉಷಾ ನರ್ಸಿಂಗ್ ಹೋಂ ನೆರವು ಕೋರುವುದಾಗಿ ತಿಳಿಸಿದರು.
  - ಜಿಲ್ಲಾ ಮಟ್ಟದ ಮಹಿಳಾ ಸದಸ್ಯತ್ವ ಅಭಿವೃದ್ಧಿಗಾಗಿ ಹುರಿದುಂಬಿಸಲು ಮತ್ತು ಹಲವಾರು ಸದಸ್ಯರನ್ನು ಸೇರಿಸಲು ಮಾಜಿ ಸಹಾಯಕ ಗವರ್ನರ್ ರೊ. ಸುನೀತಾ ಶ್ರೀಧರ್ ಸಹಕರಿಸುವುದಾಗಿ ತಿಳಿಸಿದ್ದಾರೆ ಎಂದರು
  - ಈಗಿರುವ ಇಂಟರಾಕ್ಟ್ ಅಲ್ಲದೇ ಇನ್ನೂ 2–3 ಹೊಸ ಇಂಟರಾಕ್ಟ್ ಕ್ಲಬ್‌ಗಳನ್ನು ಪ್ರಾರಂಭಿಸುವುದಾಗಿ ತಿಳಿಸಿದರು.
  - ನವೆಂಬರ್ ತಿಂಗಳಲ್ಲಿ 8,9 ನೇ ತಾರೀಖಿಗೆ ಟಿ.ಆರ್.ಎಫ್. ಸೆಮಿನಾರ್ ಇರುವುದರ ಬಗ್ಗೆ ಮಾತನಾಡಿ, ರೋಟರಿ ಶಿವಮೊಗ್ಗ ಪೂರ್ವ ಇದರ ನೇತೃತ್ವವನ್ನು ವಹಿಸಿದ್ದು, ಸೆಮಿನಾರ್‌ಗೆ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಲು ಮನವಿ ಮಾಡಿದರು.
  - ಮಾಜಿ ಅಧ್ಯಕ್ಷರಾದ ರೊ.ಹೆಚ್.ಎಸ್. ಮೋಹನ್‌ರವರು ಮಾತನಾಡಿ, ಸೈಬರ್‌ಕ್ರೈಂ ಬಗ್ಗೆ ವಿಶೇಷ ಕಾರ್ಯಕ್ರಮ ವೊಂದನ್ನು ಆಯೋಜಿಸಬೇಕು ಎಂದು ಸಲಹೆ ನೀಡಿದರು.
  - ರೊ. ವೀರಣ್ಣ ಎ. ಹುಗ್ಗಿಯವರು ಟ್ರಾಫಿಕ್ ಅವೇರ್‌ನೆಸ್ ಬಗ್ಗೆ ಜೆ.ಎನ್.ಎನ್.ಸಿ., ಜ್ಞಾನದೀಪ ಮತ್ತು ಭಾರತೀಯ ವಿದ್ಯಾಭವನದ ಚಾಲಕರಿಗೆ ವಿಶೇಷ ತರಬೇತಿ ಕಾರ್ಯಕ್ರಮ ಹಮ್ಮಿಕೊಳ್ಳಬೇಕೆಂದು ಸಲಹೆ ನೀಡಿದರು.
  - ರೊ.ವೀರಣ್ಣ ಎ. ಹುಗ್ಗಿಯವರು ಮಾತನಾಡಿ, ನಮ್ಮ ಕ್ಲಬ್‌ನ ಸದಸ್ಯರಾದ ರೊ. ನಟರಾಜ್ ಸಿ. ಪಾಟೀಲ್‌ರವರು ವರಾಹಿ ಜಲವಿದ್ಯುತ್ ಯೋಜನೆಯಿರುವ ಮಾಣಿಡ್ಯಾಂ ಮತ್ತು ಹೊಸಂಗಡಿ ಸುರಂಗ ಮಾರ್ಗದ ವಿದ್ಯುತ್ ಉತ್ಪಾದನಾ ಕೇಂದ್ರಕ್ಕೆ ಭೇಟಿ ನೀಡುವ ಪಿಕ್‌ನಿಕ್ ಹಮ್ಮಿಕೊಳ್ಳಬೇಕೆಂಬ ಸಲಹೆ ನೀಡಿರುವುದಾಗಿ ತಿಳಿಸಿದರು.
  - ಅಧ್ಯಕ್ಷರು ಪಿಳ್ಳಂಗೆರೆ ಶಾಲೆಗೆ ಪಠ್ಯ ಪುಸ್ತಕಗಳನ್ನು ನೀಡಬೇಕಾಗಿದ್ದು ಇದಕ್ಕೆ ಬೇಕಾಗಿದ್ದ ಸುಮಾರು 20000.00 ರೂಗಳು ಈಗಾಗಲೇ ಸಂಗ್ರಹವಾಗಿದೆ. ಶಾಲೆ ಪ್ರಾರಂಭವಾದ 8 ನೇ ತಾರೀಕಿಗೆ ನೀಡಲು ಉದ್ದೇಶಿಸಿದೆ ಎಂದರು. ರೊ. ಎಸ್.ಜಿ. ಗೋಪಾಲ್, ರೊ.ವೈ.ವಿ.ವೆಂಕಟರಮಣ ಜೋಯ್ಸ್,



ರೊ. ಎಂ.ವಿ. ನಾಗೇಶ್, ರೊ.ಎಸ್. ಮಂಜುನಾಥ್, ರೊ. ಕಿಶೋರ್ ಶೀರನಾಳಿ, ರೊ.ಹೆಚ್.ಎಸ್. ಮೋಹನ್ ವಂತಿಕೆ ನೀಡಲು ಒಪ್ಪಿದ್ದು ಆ ಯೋಜನೆಯನ್ನು ಕಾರ್ಯಗತಗೊಳಿಸಲಾಗುವುದು ಎಂದರು.

- ರೊ. ವೀರಣ್ಣ ಎ. ಹುಗ್ಗಿಯವರು ಮಾತನಾಡಿ, ಡಾ. ಕಾಂಚನ್ ಕುಲಕರ್ಣಿಯವರು ರೊ.ಡಾ.ರಕ್ಷಾರಾವ್‌ರೊಂದಿಗೆ ಸೇರಿ ಮೆಗಾ ಹೆಲ್ತ್‌ಕ್ಯಾಂಪ್ ಆಯೋಜಿಸುವ ಬಗ್ಗೆ ತಿಳಿಸಿದ್ದಾರೆ ಎಂದು ವಿವರಿಸಿದರು.

ಕೊನೆಯಲ್ಲಿ ರೊ.ವಿಶ್ವಾಸ್ ಎಲಬುರ್ಗಿಯವರು ಸರ್ವರನ್ನು ವಂದಿಸಿದರು.

### ವಿಶೇಷ ಪ್ರಕಟಣೆ

**ದಯಮಾಡಿ ಸದಸ್ಯರು 2025–26 ನೇ ಸಾಲಿನ ತಮ್ಮ ಸದಸ್ಯತ್ವ ಶುಲ್ಕವನ್ನು ಪಾವತಿ ಮಾಡಬೇಕಾಗಿ ವಿನಂತಿ.**

**– ರೊ. ಆರ್. ಆನಂದ್, ಅಧ್ಯಕ್ಷರು**

**ಬ್ಯಾಂಕ್ ಪಾವತಿ ವಿವರ:**

**ROTARY CLUB SHIMOGA**
**KARNATAKA BANK LTD.**
**Savalanga Road**
**Shimoga - 577 201**
**A/c No. : 7322500103371501**
**IFSC: KARB0000732**

*Scan QR Code to Pay*

## THE OBJECT OF ROTARY

The Object of Rotary is to encourage and foster the ideals of service as a basis of worthy enterprise and in particular, to encourage and foster:

**01 FIRST**
The development of acquaintance as an opportunity for service;

**02 SECOND**
High ethical standards in business and professions; the recognition of the worthiness of all useful occupations; and the dignifying of each Rotarian's occupation as an opportunity to serve society;

**03 THIRD**
The application of the ideal of service in each Rotarian's personal, business/professional, and community life;

**04 FOURTH**
The advancement of international understanding, goodwill, and peace through a world fellowship of business and professional persons united in the ideal of service.

**ಕಣ್ಣು ಸುಡುವಿಕೆಗೆ ಮನೆಮದ್ದುಗಳು (Burning sensation of eyes)**

**ರೊ. ಡಾ. ಕಾಂಚನ್ ಕುಲಕರ್ಣಿ,** ಬಿ.ಎ.ಎಂ.ಎಸ್. ಎಂ.ಡಿ. ಪಿಜಿಡಿಸಿಸಿಟಿ

**ಪಂಚಮಿ ಆಯುರ್ವೇದ ಚಿಕಿತ್ಸಾ ಕೇಂದ್ರ, ಕುವೆಂಪು ರಸ್ತೆ, ಶಿವಮೊಗ್ಗ**

- ಸ್ವಲ್ಪ ಬೆಳ್ಳುಳ್ಳಿಯನ್ನು ಎಣ್ಣೆಯಲ್ಲಿ ಕುದಿಸಿ, ತಣ್ಣಗಾದ ನಂತರ 1–2 ಹನಿಗಳನ್ನು ಕಿವಿಯಲ್ಲಿ ಹಾಕಬಹುದು. ಇದು ಸಾಂಕ್ರಾಮಿಕೆಯನ್ನು ಕಡಿಮೆ ಮಾಡುತ್ತದೆ.
- ತಾಜಾ ತುಳಸಿ ಎಲೆಗಳನ್ನು ನುರಿದು ಅದರ ರಸವನ್ನು ಎಣ್ಣೆಯಲ್ಲಿ ಕುದಿಸಿ, ತಣ್ಣಗಾದ ನಂತರ 1–2 ಹನಿ ಕಿವಿಯಲ್ಲಿ ಹಾಕಿದರೆ ನೋವು ಕಡಿಮೆ ಆಗುತ್ತದೆ.
- ಸ್ವಲ್ಪ ಬಿಸಿ ಮಾಡಿದ ಆಲಿವ್ ಎಣ್ಣೆಯನ್ನು ಹನಿಯಾಗಿ ಹಾಕಿದರೆ ಕಿವಿ ಒಣಗುವುದನ್ನು ಹಾಗೂ ನೋವನ್ನು ಕಡಿಮೆ ಮಾಡುತ್ತದೆ.

**ಎಚ್ಚರಿಕೆ: ಕಿವಿಯಿಂದ ರಕ್ತ ಅಥವಾ ದ್ರವ ಹೊರಬಂದರೆ, ಕಿವಿಯಲ್ಲಿ ಪರದೆ ಹರಿದಿದ್ದರೆ ಯಾವುದೆ ಮನೆಮದ್ದು ಬಳಸಬೇಡಿ. ನೋವು ಜಾಸ್ತಿಯಾದರೆ ಅಥವಾ ಹೆಚ್ಚು ದಿನ ಮುಂದುವರೆದರೆ ತಕ್ಷಣ ವೈದ್ಯರನ್ನು ಸಂಪರ್ಕಿಸಿ.**

***Rotary Information :-***

Rotary RID 3182

## CLUB SERVICE




Club Service works to strengthen fellowship of members through training and hospitality. Clubs have serious topics to work towards, so having various social events that bring members and their guests informally and for fun, contributes to genuine fellowship.

Club service focusses on strengthening fellowship and ensuring the effective functioning of the clubs. The purpose of club service is to foster successful administration of the Rotary club. Club service is regarded by many Rotarians as the most important part of the club mechanism because without a well functioning club, little else can be performed via the other avenues of service.

- It promotes fellowship that binds the Rotarians together
- It makes members aware of their obligations, duties and responsibilities towards Rotary and the privileges of being a Rotarian
- It builds on the principle of classification, unique only to Rotary, bringing together a cross section of the society
- It infuses the spirit of regular attendance amongst Rotarians to make them 'involved'.
- It aims at providing Rotary information to the members to keep them 'informed'.
- It plans weekly programs to keep the Rotarians 'interested' and keeps them 'updated' through club bulletins
- It promotes public relations and presents Rotary to the community

The district club service Director and the team consisting of chairmen and vice chairmen support the President and the club team to manage, coordinate, support, encourage and communicate with all those who are responsible for aspects of club service. An effective and well balanced club involves all the members in club service activities.

ಸಂಪಾದಕೀಯ

## ಗೆಲುವಿನ ಜೀವನ



ಒಮ್ಮೆ ಗಿಡದಡಿಯಲ್ಲಿ ಕುಳಿತಿದ್ದ ಜ್ಯೋತಿಷಿಯೊಬ್ಬ ಗಿಡದಲ್ಲಿ ಕುಳಿತು ಹಾಡುತ್ತಿದ್ದ ಮೈನಾ ಪಕ್ಷಿಯ ಧ್ವನಿಯನ್ನು ಕೇಳಿ ಸಂತುಷ್ಟನಾದ. ಜ್ಯೋತಿಷ್ಯ ಬಲ್ಲ ಆತ ಮೈನಾವನ್ನು ಕಂಡು ಖಿನ್ನನಾದ. ಪಕ್ಷಿ ಕೇಳಿತು, 'ಏಕೆ ನನ್ನ ಹಾಡು ನಿಮಗೆ ಹಿಡಿಸಲಿಲ್ಲವೇ?' ಆ ಜ್ಯೋತಿಷಿಯು, 'ಹಾಗಲ್ಲ ಗೆಳೆಯನೇ, ಇಷ್ಟೊಂದು ಮಧುರ ಗಾನಸುಧೆ ಸುರಿಸುವ ನೀನೆಷ್ಟು ದುರ್ದೈವಿ! ನಿನ್ನ ಆಯುಷ್ಯ ಇನ್ನೆರಡು ದಿನ ಮಾತ್ರ.' ಅದಕ್ಕೆ ಬೇಸರವೆನಿಸಿತು. ಆದರೆ ತಕ್ಷಣವೇ ಉಚ್ಚಕಂಠದಿಂದ ಮಧುರ ಗೀತೆಯನ್ನು ಹೇಳತೊಡಗಿತು. ಆಶ್ಚರ್ಯಚಕಿತನಾದ ಜ್ಯೋತಿಷಿ ಕೇಳಿದ 'ನಿನಗೆ ಸಾವಿನ ಭಯವಿಲ್ಲವೇ?' ಮೈನಾ ಹೇಳಿತು, 'ನಾವು ಸಾಯಲು ಬಂದವರಲ್ಲ, ಬದುಕಲು ಬಂದವರು. ಸಾವು–ನೋವು ಯಾರಿಗೂ ತಪ್ಪಿದ್ದಲ್ಲ. ಸಾವು ಬಂದಾಗ ಸತ್ತರಾಯಿತು.' ಮೈನಾಳ ಮಾತು ಕೇಳಿ ಜ್ಯೋತಿಷಿ ಈ ಅರಿವು ಮಾನವರಿಗೂ ಇರುವುದಾದರೆ ಎಂದು ಯೋಚಿಸುತ್ತ ಮುನ್ನಡೆದ.

ಮನುಷ್ಯನಲ್ಲಿ ಜೀವನೋತ್ಸಾಹವಿದ್ದರೆ ಸ್ವರ್ಗವೇ ಇಳಿಯುವುದು! ಮಕ್ಕಳ ಕೈಯಲ್ಲಿ ನಾಲ್ಕಾಣೆಯ ಗೊಂಬೆ ಇದ್ದರೆ ಅದನ್ನೇ ಎಷ್ಟೊಂದು ಉತ್ಸಾಹದಿಂದ ನೊಡುತ್ತವೆ ! ಮಾತನಾಡಿ, ಆಡಿ–ಹಾಡಿ ನಲಿಯುತ್ತವೆ. ಏತಕ್ಕೆ? ಕೈಬೆರಳು ನೋಡಿ ಉಂಗುರವಿಲ್ಲ, ಚಿನ್ನದ ಬಳೆಗಳಿಲ್ಲ; ತಲೆಗೆ ಬಂಗಾರದ ಕಿರೀಟವಿಲ್ಲ ಎನ್ನುತ್ತೇವೆ. ಕೈಯಲ್ಲಿರುವ ಕಾರ್ಯಕ್ಷಮತೆಯನ್ನು, ತಲೆಯಲ್ಲಿರುವ ದಿವ್ಯಜ್ಞಾನ ಜ್ಯೋತಿಯನ್ನು ನಾವು ನೋಡುವುದಿಲ್ಲ. ನಮ್ಮ ಕಣ್ಣಿನ ಕಳೆ, ಮುಖದ ತೇಜ, ಮಾತಿನ ಮಾಧುರ್ಯ ನೋಡುವುದಿಲ್ಲ. ನಮ್ಮ ದೇಹಗತ ಗುಣಸಿರಿಯನ್ನು ಕಂಡು ಆನಂದಿಸುವುದಿಲ್ಲ. ಅಂದಾಗ ಬದುಕಿನಲ್ಲಿ ಉತ್ಸಾಹವೆಲ್ಲಿಂದ ಬಂದೀತು?

ಸಾಗರದ ದಡದಲ್ಲಿ ಮರಳಿನ ಮೇಲೆ ಒಂದು ಏಡಿ ಅಡ್ಡಡ್ಡವಾಗಿ ನಡೆದಿತ್ತು. ಅಲ್ಲಿಯೇ ಇದ್ದ ಸಿದ್ಧಪುರುಷರು ಏಡಿಯ ವಿಕೃತ ದೇಹವನ್ನು, ಅಡ್ಡ ನಡಿಗೆಯನ್ನು ನೋಡಿ ಮರುಗಿದರು. ಏಡಿಯನ್ನು ಕರೆದು ಹೇಳಿದರು, 'ಅಯ್ಯೋ ಪಾಪ! ಭಗವಂತ ಉಳಿದೆಲ್ಲ ಪ್ರಾಣಿಗಳಿಗೆ ಸುಂದರ ದೇಹ ಕೊಟ್ಟಿದ್ದಾನೆ. ನಿನಗೆ ಮಾತ್ರ ಅನ್ಯಾಯವಾಗಿದೆ. ನಿನಗೆ ಎಂಥ ದೇಹ, ಬಣ್ಣ ಬೇಕು ಹೇಳು, ಈಗಲೇ ಕೊಡುವೆ?'

ಏಡಿ ಹೇಳಿತು, 'ನನಗೆ ಅನ್ಯಾಯವಾಗಿದೆ ಎಂದು ನಿಮಗಾರು ಹೇಳಿದರು? ಈ ಶರೀರದೊಂದಿಗೆಯೇ ನಾವು ಕೋಟಿ ವರುಷಗಳಿಂದ ಬದುಕಿದ್ದೇವೆ. ಇದಕ್ಕಿಂತ ಸಶಕ್ತ, ಸುಂದರ ದೇಹ ಇನ್ನೆಲ್ಲಿ ಇರಲು ಸಾಧ್ಯ?' ಏಡಿಯ ನುಡಿ ಕೇಳಿ ಸಂತರು ದೇವರು ಮಾಡಿದ್ದು ಸರಿ ಎಂದು ಅರಿತರು?

ನಿಸರ್ಗ ನಮಗೇನು ಕೊರತೆ ಮಾಡಿದೆ? ಎಲ್ಲರಲ್ಲಿಯೂ ಸ್ವಲ್ಪ ದೋಷ ಇದ್ದುದೇ! ಅದನ್ನು ತಲೆಯಿಂದ ಸರಿಸಿ ಉತ್ಸಾಹಿಗಳಾಗಿ ಬಾಳಬೇಕು. ಸಂತಸದಿಂದ ನೂರು ವಸಂತಗಳನ್ನು ಪೂರೈಸಬೇಕು.

• ರೊ. ಎಂ. ಮಾಧವಾಚಾರ್

**ಎಲ್ಲ ಸಂದರ್ಭದಲ್ಲಿಯೂ ಮಾತನಾಡಬೇಕು ಎಂಬ ಆತುರಬೇಡ, ಅನೇಕ ಸಲ ಮಾತಿಗಿಂತ ಮೌನವೇ ಪರಿಸ್ಥಿತಿಯನ್ನು ಚೆನ್ನಾಗಿ ನಿಭಾಯಿಸುತ್ತದೆ.**

OCT




### 4. Economic and Community Development Month

- Organise awareness seminar on self employment at colleges/ universities.
- Develop concept of Micro Credit system.
- Organise trade exhibitions.
- Take up Entrepreneurship Development Program.
- Organise public meetings on Consumer Rights.

### THE 4-WAY TEST




1. Is it the TRUTH
2. Is it FAIR to all concerned?
3. Will it build GOODWILL & BETTER FRIENDSHIP?
4. Will it be BENEFICIAL to all concerned?

### ಜನ್ಮ ದಿನದ ಶುಭಾಶಯಗಳು



M.V.Nagesh
5th Oct





Dorai S.
07th Oct

To,

Book Post